

ಚಿತ್ರಗಳು: ವೆಂಕಟ್ರಮಣ ಭಟ್

"ಭೋಂಂಂ..." ಎಂದು ಮೊಳಗಿದ ಫ್ಯಾಕ್ಟರಿಯ ಸೈರನ್ನಿನ ಸದ್ದಿಗೆ ಎಚ್ಚರವಾಯಿತು. 'ಛೆ, ಇದು ದಿನಾ ಇದ್ದದ್ದ...' ಎಂದು ಬೈದುಕೊಳ್ಳುತ್ತ ಲೋಟವನ್ನೆತ್ತಿ ಗಟಗಟ ನೀರು ಕುಡಿದೆ. ಗಂಟೆ ಹನ್ನೆರೆಡಾಗಿತ್ತು. ಎದೆಯಲ್ಲೇನೋ ವಿಚಿತ್ರ ತಳಮಳವಾಗುತ್ತಿದ್ದಂತೆ ಮೊಬೈಲ್ ರಿಂಗಣಿಸಿತು. ಎತ್ತುತ್ತಲೇ ಗುರುಕಾಕಾ ಅಳುಗೊರಲಿನಲ್ಲಿ, "ಪಾಂಡೂ... ನಿಮ್ಮ ಕಾಕು ಈವತ್ತ ನಂದಿ ಬೆಟ್ಟದ ಟಿಪ್ಪು ಡ್ರಾಪ್‌ನಿಂದ ಕಾಲ್ಜಾರಿ ಬಿದ್ದು... ನಮ್ಮನ್ನೆಲ್ಲಾ ಬಿಟ್ಟು ಹೋಗೇಬಿಟ್ಲಪಾ... ನೀ ಮನಿಗೆ ಬಾ. ಲಗೂನ ಬಾ..." ಎಂದದ್ದೇ ಬಿಕ್ಕಿದರು. ಆಘಾತವಾಗಿತ್ತು ನನಗೆ. ಅರಗಿಸಿಕೊಳ್ಳಲಾಗಲಿಲ್ಲ. ವಯಸ್ಸಾದವರು... ಇಬ್ಬರೇ ಏಕೆ ನಂದಿಗೆ ಹೋದರೋ?... ಹೋದರೂ ಟಿಪ್ಪು ಡ್ರಾಪ್ ಬಳಿ ಏಕೆ ಹೋಗಬೇಕಿತ್ತು?... ನೂರೆಂಟು ಪ್ರಶ್ನೆಗಳು. ಉತ್ತರ ಅಲ್ಲಿಗೆ ಹೋಗಿಯೇ ತಿಳಿಯಬೇಕಿತ್ತು. ಕುಪ್ಪೆಲೂರಿಗೆ ಅವ್ವ, ಅಪ್ಪನಿಗೂ ಫೋನ್ ಮಾಡಿ ತಿಳಿಸಿದೆ. ಹೌಹಾರಿದವರಿಗೆ, "ಸಮಾಧಾನ ತೊಗೊರಿ. ಗೋಪಿಗೆ ಹೇಳ್ತೇನಿ. ಅವನ ಕಾರನ್ಯಾಗ ಕರಕೊಂಡು ಬರ್ತಾನ. ಈಗಿಂದೀಗ ಬಿಟ್ಟಬಿಡ್ರಿ" ಎಂದವನೇ ಗೋಪಿಗೂ ಹೇಳಿ ವ್ಯವಸ್ಥೆ ಮಾಡಿದೆ. ಉಳಿದ ಕೆಲವು ನೆಂಟರಿಷ್ಟರಿಗೆ ಫೋನ್ ಮಾಡುತ್ತಲೇ ಬಟ್ಟೆ ಧರಿಸಿ, ಯಾವುದಕ್ಕೂ ಇರಲಿ ಎಂದು ಸ್ವಲ್ಪ ದುಡ್ಡಿಟ್ಟುಕೊಂಡು, ಕ್ರೆಡಿಟ್ ಕಾರ್ಡಗಳನ್ನೂ ಇಟ್ಟುಕೊಂಡು ಕಾರಿನಲ್ಲಿ ಹೊರಟೆ. ರಾತ್ರಿ ರಸ್ತೆಗಳು ಬಹುತೇಕ ನಿರ್ಜನವಾಗಿದ್ದರೂ ತಲೆಯ ತುಂಬ ಕಾಕು ತುಂಬಿಕೊಂಡದ್ದರಿಂದ ಮುಂಜಾಗ್ರತೆಯಾಗಿ ವೇಗವನ್ನು ನಲವತ್ತಕ್ಕೇ ಸೀಮಿತಗೊಳಿಸಿದೆ. ರಾಜಾಜಿನಗರದಿಂದ ಸರ್ಜಾಪುರ ಮುಟ್ಟುವಲ್ಲಿ ಅರ್ಧ ಗಂಟೆಯಾದರೂ ಬೇಕಿತ್ತು. ಕಂಪಿಸುತ್ತಿದ್ದ ಮನವನ್ನು ಸ್ತಿಮಿತದಲ್ಲಿಟ್ಟುಕೊಳ್ಳಲು